**ದಿನಾಂಕಃ 10-11-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 3 ಮತ್ತು 4 ನೇ ಪ್ರತಿವಾದಿಗಳ ಪರ ಶ್ರೀ ವೈ ಹೆಚ್ ಕೆ ವಕೀಲರಿಂದಃ**

ನಾನು 4 ನೇ ತರಗತಿಯವರಗೆ ರಟ್ಟಿಹಳ್ಳಿಯಲ್ಲಿ ಒದಿರುತ್ತೇನೆ. ನಾನು ಗುಡ್ಡದ ಹೊಸಳ್ಳಿಯಲ್ಲಿ ಜನಿಸಿರುತ್ತೇನೆ. ನಾನು 1976-77 ರಲ್ಲಿ ರಟ್ಟಿಹಳ್ಳಿಯಲ್ಲಿ ಜನಿಸಿರುತ್ತೇನೆ. ಆ ಬಗ್ಗೆ ನಾನು ಜನ್ಮ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಮ್ಮ ತಂದೆಯವರಿಗೆ ನಾನು, ನಾಗವ್ವ , ಕಮಲವ್ವ , ಪಾರವ್ವ , ಗುತ್ತೆವ್ವ ಎಂಬ ಮಕ್ಕಳಿರುತ್ತೇವೆ. ನನ್ನ ಅಕ್ಕ ತಂಗಿಯವರು ಶಾಲೆಯನ್ನು ಕಲಿತಿರುವುದಿಲ್ಲ. ನನ್ನ ತಾಯಿ 1988 ರಲ್ಲಿ ರಟ್ಟಿಹಳ್ಳಿಯಲ್ಲಿ ತೀರಿಕೊಂಡಿರುತ್ತಾರೆ. ನಮ್ಮ ತಾಯಿಯವರು ಮೃತಪಟ್ಟ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಕೊಟ್ಟಿದ್ದೇವೆ ನನಗೆ ನೆನಪಿಲ್ಲ. ನಾನು ಚಾಲಕ ವೃತ್ತಿ ಮಾಡುತ್ತಿದ್ದೇನು. ನನಗೆ ಲೈಸೆನ್ಸ ಇರುತ್ತದೆ. ಈಗ ನಾನು ಎನೂ ಕೆಲಸ ಮಾಡುತ್ತಿಲ್ಲ. ಆದರೆ ನಾನು ರಟ್ಟಿಹಳ್ಳಿ ಗ್ರಾಮದಲ್ಲಿ ವಾಸವಾಗಿರುತ್ತೇನೆ. ನಾನು ಶಾಲೆ ಕಲಿತ ಬಗ್ಗೆ ಶಾಲಾ ದೃಡೀಕರಣ ಪತ್ರಗಳು ಹಾಗೂ ಚುನಾವಣಾ ಗುರುತಿನ ಚೀಟಿ ಹಾಗೂ ರೇಷನ್ ಕಾರ್ಡ , ಜನನ ಪ್ರಮಾಣ ಪತ್ರಗಳನ್ನು ಹಾಜರಪಡಿಸಿದ್ದೀರಾ ಎಂದರೆ ಇಲ್ಲ. ಅವುಗಳು ನನ್ನ ಬಳಿ ಇಲ್ಲ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ನನ್ನ ಅಕ್ಕ ತಂಗಿಯರಿಗೂ ಸಹ ಸದರಿ ದಾಖಲೆಗಳೆ ಇವೆ ಅವುಗಳನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ನನ್ನ ತಾಯಿ ಯಾವ ಇಸವಿಯಲ್ಲಿ ಮದುವೆಯಾದರು ಎಂದು ನನಗೆ ಗೊತ್ತಿಲ್ಲ. ನಮ್ಮ ತಾಯಿಯವರು ಮದುವೆಯಾದ ಬಗ್ಗೆ ಯಾವುದಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ನಮ್ಮ ತಾಯಿಯವರು ಬೀರಪ್ಪ ಎನ್ನುವವರ ಜೊತೆ ಮದುವೆಯಾಗಿರುತ್ತಾರೆ. ಅವರು ಎಲ್ಲಿ ಮದುವೆಯಾಗಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ಮದುವೆ ಎಲ್ಲಿ ಆಯಿತು ಹೇಗೆ ಆಯಿತು ಎಂದು ನಮ್ಮ ಹಿರಿಯರನ್ನು ಕೇಳಿ ತಿಳಿದುಕೊಂಡಿಲ್ಲ. ನನ್ನ ತಾಯಿ ಹನುಮವ್ವ ರಟ್ಟಿಹಳ್ಳಿಯವರಾಗಿರುತ್ತಾರೆ. ಅವರು ಪೋತಿಯಾಗಿರುತ್ತಾರೆ. ನನ್ನ ತಂದೆ ಹೆಸರು ಬೀರಪ್ಪ ಅಜ್ಜಪ್ಪ ಕಂಬಳಿ ಅಂತಾ ಇರುತ್ತದೆ ಹಾಗೂ ಹಳ್ಳಳ್ಳಿ , ಕುರುಬರು ಅಂತಾ ಕರೆಯುತ್ತಾರೆ ಸಾಕ್ಷಿ ಸ್ವ ಇಚ್ಛೆಯಿಂದ ನುಡಿಯುತ್ತಾರೆ. ನನ್ನ ತಂದೆಯವರು ಯಾವ ಇಸವಿಯಲ್ಲಿ ತಿರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಆಗ ನಾನು 3 ವರ್ಷದವನು ಇದ್ದೇನು. ನನ್ನ ಅಕ್ಕ ತಂಗಿಯವರು ಯಾವ ಇಸವಿಯಂದು ಹುಟ್ಟಿದ್ದಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ನಾವು ಗುಡ್ಡದ ಹೊಸಳ್ಳಿಯವರು ಎಂದು ತೋರಿಸಲು ಯಾವುದಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ನನ್ನ ತಂದೆಯವರ ಜನ್ನ ದಿನಾಂಕ ಹಾಗೂ ವಂಶವೃಕ್ಷವನ್ನು ಕೊಟ್ಟಿದ್ದೇನೆ. ಹಾಗೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಸುಮಾರು 12 ಆಸ್ತಿಗಳ ಕುರಿತಂತೆ ದಾವೆಯನ್ನು ಸಲ್ಲಿಸಿರುತ್ತೇನೆ. ಅದರಲ್ಲಿರುವ 3- 4 ಸರ್ವೆ ನಂಬರುಗಳನ್ನು ಹೇಳುತ್ತೇನೆ ಎಂದು ಹೇಳುತ್ತಾರೆ. ದಾವಾ ಆಸ್ತಿಗಳ ಚೆಕ್ಕು ಬಂದಿಯನ್ನು ನನಗೆ ಹೇಳಲು ಆಗುವುದಿಲ್ಲ. ಗ್ರಾಮ ಪಂಚಾಯತಿ ಆಸ್ತಿಗಳ ಕುರಿತಂತೆ ದಾವಾ ಆಸ್ತಿಗಳ ಚೆಕ್ಕು ಬಂದಿಗಳನ್ನು ಹೇಳಲು ಆಗುವುದಿಲ್ಲ. ಸರ್ವೆ ನಂ. 46/4 ರಲ್ಲಿ 1 ಎಕರೆ 4 ಗುಂಟೆ, ಸರ್ವೆ ನಂ.43 ರಲ್ಲಿ 1 ಎಕರೆ 38 ಗುಂಟೆ , ಇನೊಂದು 1 ಎಕರೆ 31 ಗುಂಟೆ ಇದ್ದು ಅದರ ಸರ್ವೆ ನಂಬರು ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿದ ವಂಶವೃಕ್ಷಕ್ಕೂ ಹಾಗೂ ಪ್ರತಿವಾದಿ 1 ರಿಂದ 4 ಮತ್ತು 8 ನೇ ಪ್ರತಿವಾದಿಯ ಕುಟುಂಬಕೂ ನನಗೂ ಯಾವುದೇ ರೀತಿಯ ಸಂಬಂದ ಇಲ್ಲ ಎಂದರೆ ಸರಿಯಲ್ಲ. ವಂಶವೃಕ್ಷ ಖೊಟ್ಟಿ ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿ 5 ರಿಂದ 7 ನನ್ನ ಅಕ್ಕ ತಂಗಿಯವರು ಇರುತ್ತಾರೆ. ಆ ಬಗ್ಗೆ ಯಾವುದಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ವಂಶವೃಕ್ಷ ಹಾಜರುಪಡಿಸಿರುತ್ತೇನೆ. ಪ್ರತಿವಾದಿ 1 ರಿಂದ 4 ಮತ್ತು 8 ನೇದವರು ನಮ್ಮ ಕುಟುಂಬದ ಸದಸ್ಯರು ಎಂದು ತೋರಿಸಲು ಯಾವುದಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ಪ್ರತಿವಾದಿ 1 ರಿಂದ 4 ಮತ್ತು 8 ನೇದವರು ನಾನು ಮತ್ತು 5 ರಿಂದ 7 ನೇ ಪ್ರತಿವಾದಿಗಳಿಗೆ ಸಂಬಂದಪಡದ ವ್ಯಕ್ತಿಗಳು ಆಗಿರುವುದರಿಂದ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ವಂಶವೃಕ್ಷದಲ್ಲಿ ತೋರಿಸಿದ ಸಿದ್ದಪ್ಪ ಯಾವಾಗ ತೀರಿಕೊಂಡ ಎಂದು ನನಗೆ ಗೊತ್ತಿಲ್ಲ. ಸಿದ್ದಪ್ಪನ ಹೆಂಡತಿ ದ್ಯಾಮವ್ವ ಯಾವಾಗ ತೀರಿಕೊಂಡಳು ಎಂದು ನನಗೆ ಹೇಳಲು ಆಗುವುದಿಲ್ಲ. ಸಿದ್ದಪ್ಪನ ಮಕ್ಕಳು ಹನುಮಂತಪ್ಪ ಮತ್ತು ಬಸವಂತಪ್ಪ ಇಬ್ಬರು ಮಕ್ಕಳಿದ್ದು ಅದರಲ್ಲಿ ಬಸವಂತಪ್ಪ ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ಬಸವಂತಪ್ಪನ ಹೆಂಡತಿ ನಾಗಮ್ಮ ಯಾವಾಗ ತೀರಿಕೊಂಡಳು ಎಂದು ನನಗೆ ಹೇಳಲು ಆಗುವುದಿಲ್ಲ. ಹನುಮಂತಪ್ಪನಿಗೆ ಅಶೋಕ ಎನ್ನುವ ಒಬ್ಬನೇ ಮಗನಿದ್ದು ಅವನೊಬ್ಬನನ್ನು ನಾನು ದಾವೆಯಲ್ಲಿ ತೋರಿಸಿರುತ್ತೇನೆ. ಬಸವಂತಪ್ಪನಿಗೆ ಗಣೇಶ ಎನ್ನುವ ಒಬ್ಬನೇ ಮಗನಿರುತ್ತಾನೆ. ವಂಶವೃಕ್ಷದಲ್ಲಿ ತೋರಿಸಿದ ಅಜ್ಜಪ್ಪನ ಮಗ ಬೀರಪ್ಪ ಮದುವೆಯಾಗದೇ ತೀರಿಕೊಂಡರು ಎಂದರೆ ಸರಿಯಲ್ಲ. ಬೀರಪ್ಪನ ಹೆಂಡತಿ ಹನುಮವ್ವ ಎಂದು ಸುಳ್ಳು ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ಬೀರಪ್ಪನ ಮಕ್ಕಳು ವಾದಿ ಮತ್ತು 5 ರಿಂದ 7 ನೇ ಪ್ರತಿವಾದಿಗಳು ಎಂದು ವಂಶವೃಕ್ಷದಲ್ಲಿ ಸುಳ್ಳು ತೋರಿಸಿದ್ದೇನೆ ಎಂದರೆ ಸರಿಯಲ್ಲ.

ಅಜ್ಜಪ್ಪನಿಗೆ ಸಿದ್ದಪ್ಪ ಮತ್ತು ಬೀರಪ್ಪ ಎಂಬ ಇಬ್ಬರು ಮಕ್ಕಳಿದ್ದು ಇದರಲ್ಲಿ ಸಿದ್ದಪ್ಪ 1960 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.1 ರಿಂದ 4 ಮತ್ತು 8 ನೇ ದವರು ಸಿದ್ದಪ್ಪನ ಘರಾಣೇಕ್ಕೆ ಸಂಬಂದಿಸಿದವಾಗಿರುತ್ತಾರೆ ಎಂದರೆ ಸರಿ. ಸಿದ್ದಪ್ಪನ ತಮ್ಮ ಬೀರಪ್ಪ 1958 ರಲ್ಲಿ ಗುಡ್ಡದ ಹೊಸಳ್ಳಿ ಗ್ರಾಮದಲ್ಲಿ ತೀರಿಕೊಂಡಿರುತ್ತಾನೆ ಎಂದರೆ 1966 ರಲ್ಲಿ

ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಬೀರಪ್ಪ ಮದುವೆಯಾಗದೇ ತೀರಿಕೊಂಡರು ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ನ್ಯಾಯಾಲಯಕ್ಕೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ ಪಿ -21 ನನ್ನ ತಾಯಿಯ ಮರಣ ಪ್ರಮಾಣ ಪತ್ರವನ್ನು ದಾವೆಯನ್ನು ಸಲ್ಲಿಸಿದ ನಂತರ ಅಂದರೆ ದಿನಾಂಕ 24.03.2025 ರಂದು ಸಲ್ಲಿಸಿರುತ್ತೇನೆ ಎಂದರೆ ಸರಿ. ಕೇಸಿಗೆ ಅನುಕೂಲವಾಗಲಿ ಎಂದು ನಿ ಪಿ -21 ನ್ನು ಖೊಟ್ಟಿಯಾಗಿ ತಯಾರಿಸಿಕೊಂಡು ಬಂದು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿ ಪಿ -22 ಸಿದ್ದಪ್ಪನ ತಮ್ಮ ಬೀರಪ್ಪನಿಗೆ ಸಂಬಂದಪಟ್ಟ ದಾಖಲೆ ಅಲ್ಲ ಎಂದರೆ ಸರಿಯಲ್ಲ. ಸದರಿ ನಿ ಪಿ -22 ರಲ್ಲಿ ಬೀರಪ್ಪ ಅಜ್ಜಪ್ಪ ಹಳ್ಳಳ್ಳಿ ಅಂತಾ ಇದ್ದು ಇದು ಪ್ರತಿವಾದಿ 2 ರಿಂದ 4 ರವರ ಘರಾಣೆಯವರಿಗೆ ಸಂಬಂದಪಟ್ಟ ದಾಖಲೆ ಅಲ್ಲ ಎಂದರೆ ಸರಿಯಲ್ಲ. ನಿ ಪಿ -22 ರಲ್ಲಿ ಹೆಂಡತಿ ಹೆಸರು ಇದರಲ್ಲಿ ನಮೂದು ಆಗಿಲ್ಲ ಎಂದರೆ ಸರಿಯಲ್ಲ. ನಾವು ಬೀರಪ್ಪನ ವಂಶಸ್ಥರು ಎಂದು ತೋರಿಸಲು ನಿ ಪಿ -22 ನ್ನು ಸುಳ್ಳು ಸೃಷ್ಠಿಸಿಕೊಂಡು ಬಂದು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ನಾನೇ ತಹಶೀಲ್ದಾರ ರಟ್ಟಿಹಳ್ಳಿಯವರಿಗೆ ನಿ ಪಿ -23 ವಂಶವೃಕ್ಷವನ್ನು ತಯಾರಿಸುವಂತೆ ಅರ್ಜಿ ಕೊಟ್ಟಿರುತ್ತೇನೆ ಎಂದರೆ ಸರಿ. ಸದರಿ ಅರ್ಜಿಯಲ್ಲಿ ನಾನು ಬೀರಪ್ಪ ತಂದೆ ಅಜ್ಜಪ್ಪ ಕಂಬಳಿ ಉರ್ಫ ಹಳ್ಳಳ್ಳಿ ಅಂತಾ ಹೇಳಿ ಪ್ರಸ್ತುತ ಕೇಸಿಗೆ ಅನುಕೂಲವಾಗುವಂತೆ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿ ಪಿ -23 ರಲ್ಲಿ ತೋರಿಸಿದ ವಂಶವೃಕ್ಷಣದಲ್ಲಿ ತೋರಿಸಿದ ಹೆಸರುಗಳು ಖೊಟ್ಟಿಯಾಗಿರುತ್ತವೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಆಸ್ತಿಯನ್ನು ಕಬಳಿಸಬೇಕೆಂದು ನಿ ಪಿ -23 ನ್ನು ಸೃಷ್ಠಿಸಿದ್ದೇನೆ ಎಂದರೆ ಸರಿಯಲ್ಲ.

ದಾವಾ ಅನುಕ್ರಮ ಸಂಖ್ಯೆ 2 ಹನುಮಂತಪ್ಪ ಮತ್ತು ಬಸವಂತಪ್ಪ ರವರು 1981 ರಲ್ಲಿ ಇಬ್ಬರು ಜಂಟಿಯಾಗಿ ಖರೀದಿ ಮಾಡಿರುತ್ತಾರೆ ಎಂದರೆ ಖರೀದಿ ಮಾಡಿರಬಹುದು ಆದರೆ ಅದು ನಮ್ಮ ಅಜ್ಜರ ಆಸ್ತಿ ಎಂದು ನುಡಿಯುತ್ತಾರೆ. ದಾವಾ ಅನುಕ್ರಮ ಸಂಖ್ಯೆ 2,4,5,8 ರಿಂದ 10 ನೇದ್ದವುಗಳು ಹನುಮಂತಪ್ಪ ಮತ್ತು ಬಸವಂತಪ್ಪ ಜಂಟಿಯಾಗಿ ಖರೀದಿಸಿದ ಆಸ್ತಿಗಳು ಎಂದರೆ ಇರಬಹುದು ಆದರೆ ನಮ್ಮ ಅಜ್ಜನ ಆಸ್ತಿಗಳು ಎಂದು ನುಡಿಯುತ್ತಾರೆ. ಎರಡು ಗ್ರಾಮ ಪಂಚಾಯಿತಿ ಆಸ್ತಿಗಳು ಹನುಮಂತಪ್ಪ ಮತ್ತು ಬಸವಂತಪ್ಪ ರವರು 1967 ಮತ್ತು 1989 ರಲ್ಲಿ ಜಂಟಿಯಾಗಿ ಖರೀದಿ ಮಾಡಿದ ಆಸ್ತಿಗಳು ಎಂದರೆ ಅವು ನಮ್ಮ ಅಜ್ಜನ ಆಸ್ತಿಗಳು ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳ ಎಂದು ಸುಳ್ಳು ಕಾಣಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳನ್ನು ಪ್ರತಿವಾದಿ 3 ಮತ್ತು ಅವರ ಅಣ್ಣ ಸ್ವ ಸಂಪಾದನೆಯಿಂದ ಜಂಟಿಯಾಗಿ ಖರೀದಿಸಿದ ಆಸ್ತಿಗಳು ಎಂದರೆ ಸರಿಯಲ್ಲ.

ದಾವಾ ಶೆಡ್ಯೂಲ್ ಆಸ್ತಿಗಳನ್ನು 1983 ರಲ್ಲಿ ಪ್ರತಿವಾದಿ 3 ಮತ್ತು ಬಸವಂತಪ್ಪ ವಾಟ್ನಿ ಮಾಡಿಕೊಂಡಿರುತ್ತಾರೆ ಎಂದರೆ ಅವರು ನಮ್ಮನ್ನು ಕೇಳಿಲ್ಲ ಎಂದು ನುಡಿಯುತ್ತಾರೆ. 1983 ರಿಂದ ದಾವಾ ಶೆಡ್ಯೂಲ್ ಆಸ್ತಿಗಳನ್ನು ಅವರ ಹೆಸರಿನಲ್ಲಿ ಪಹಣಿ ಪತ್ರಿಕೆಗಳಲ್ಲಿ ಮುಂದುವರೆದಿರುತ್ತವೆ ಎಂದರೆ ಸರಿ. ದಾವಾ ಶೆಡ್ಯೂಲ್ ಆಸ್ತಿಗಳ ಮೇಲೆ 2 ರಿಂದ 4 ನೇ ಪ್ರತಿವಾದಿಗಳು ಬ್ಯಾಂಕ್ ನಿಂದ ಸಾಲವನ್ನು ಪಡೆದುಕೊಳ್ಳುತ್ತಾ ಬಂದಿರುತ್ತಾರೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ಈ ಹಿಂದೆ 1983 ರಿಂದ ದಾವೆ ಸಲ್ಲಿಸುವವರೆಗೆ ಖಾತಾ ಎಂಟ್ರಿಗಳನ್ನು ನಾನು ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಮೇಲೆ ನನ್ನ ಹಕ್ಕು ಇಲ್ಲದೇ ಇದ್ದರೂ ಸಹ ಸುಳ್ಳು ದಾಖಲೆಗಳನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಿವನಗೌಡ ತಂದೆ ಬಸನಗೌಡ ಹಿಂಡೇರ ಯಾರು ಎಂದರೆ ನನ್ನ ತಂದೆಯವರಿಗೆ ಪರಿಚಯವಿದೆ. ನನಗೆ ವೈಯಕ್ತಿಕವಾಗಿ ಅವರು ಗೊತ್ತಿಲ್ಲ. ಸದರಿ ಶಿವನಗೌಡ ತಂದೆ ಬಸನಗೌಡ ಹಿಂಡೇರ ನನಗೆ ಸುಮಾರು 8- 10 ವರ್ಷಗಳ ಹಿಂದೆ ಪರಿಚಯವಿರುತ್ತಾರೆ. ಸದರಿ ಶಿವನಗೌಡ ಹಾಗೂ ಪ್ರತಿವಾದಿ 2 ರಿಂದ 4 ರವರಿಗೆ ಒಡಾಡುವ ದಾರಿಯ ಸಂಬಂದ ಸುಮಾರು 7-8 ವರ್ಷಗಳ ಹಿಂದೆ ತಂಟೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ 2 ರಿಂದ 4 ನೇ ಪ್ರತಿವಾದಿಗಳಿಗೆ ಶಿವನಗೌಡ ರವರಿಗೆ ವೈಶಮ್ಯ ಇರುವುದರಿಂದ ಸದರಿಯವರನ್ನು ನನ್ನ ಸಾಕ್ಷಿದಾರರನ್ನಾಗಿ ಕಾಣಿಸಿದ್ದೀರಾ ಎಂದರೆ ಸರಿಯಲ್ಲ. 2 ರಿಂದ 4 ನೇ ಪ್ರತಿವಾದಿಗಳು ನಮ್ಮ ಘರಾಣೇಕ್ಕೆ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆಲ್ಲಾ ಗೊತ್ತಿದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.